


# ಜಂಭ ಇರಬಾರದು


ಕಥೆ: ಗುರುದಾಸನ್ ಚಿತ್ರ : ತಾರಿಣಿ ಬಾಲಕೃಷ್ಣನ್




6
ಯಯಾತಿ ತನ್ನ ಕೊನೆಯ ಮಗನಾದ ಪುರುವನ್ನು ಕೇಳಿದ.
ಅಪ್ಪಾ, ಇದು ನನ್ನ ಮಹಾಭಾಗ್ಯ. ನನ್ನ ಯೌವನವನ್ನು ತಾವು ಧಾರಾಳವಾಗಿ ಸ್ವೀಕರಿಸಿ. ತಮ್ಮ ವೃದ್ಧಾಪ್ಯವನ್ನು ನನಗೆ ನೀಡಿ.
7
ಮಗೂ, ನಿನ್ನ ಅಣ್ಣಂದಿರಲ್ಲಿ ಯಾರೂ ನನಗೆ ಸಹಾಯ ಮಾಡಲಿಲ್ಲ. ನನ್ನ ನಂತರ ನೀನೇ ಈ ರಾಜ್ಯಕ್ಕೆ ಉತ್ತರಾಧಿಕಾರಿಯಾಗುವೆ.
8
ಕೆಲವು ಕಾಲ ಯಯಾತಿ ಸುಖಭೋಗಗಳಲ್ಲಿ ಮೈಮರೆತ. ಆದರೆ ಕೊನೆಗೆ ಅವನಿಗೆ ಅರ್ಥವಾಯಿತು, ''ನಿಜವಾದ ಸುಖವನ್ನು ಇಂದ್ರಿಯ ಭೋಗಗಳಿಂದ ತಣಿಸಲಾಗದು, ಸುಖಭೋಗವನ್ನು ಅನುಭವಿಸಿದಷ್ಟೂ ಆಸೆ ಹೆಚ್ಚಾಗುವುದು'' ಎಂದು. ಅವನು ಕಾಡಿಗೆ ಹೋಗಿ ತಪಸ್ಸನ್ನು ಮಾಡಲು ಬಯಸಿದ.
9
ಪುರು, ನನಗೆ ಜೀವನದ ಸತ್ಯ ಅರ್ಥವಾಗಿದೆ. ನಾನು ನಿನಗೆ ಕೊಟ್ಟ ವೃದ್ಧಾಪ್ಯವನ್ನು ಮರಳಿ ಪಡೆಯುತ್ತೇನೆ. ನೀನು ನಿನ್ನ ಯೌವನವನ್ನು ಮತ್ತೆ ಪಡೆದುಕೋ. ನೀನು ಚೆನ್ನಾಗಿ ರಾಜ್ಯವನ್ನಾಳಿ, ಪುಣ್ಯ ಸಂಪಾದಿಸು.
10
ಅನೇಕ ವರ್ಷಗಳ ಕಾಲ ಯಯಾತಿ ತಪಸ್ಸು ಮಾಡಿದ. ಮುಂದೊಂದು ದಿನ ವಿಧಿಯ ಪ್ರಕಾರ ಮರಣ ಹೊಂದಿದ. ಆಗ .....
ರಾಜ ಯಯಾತಿ! ನೀನು ಮಾಡಿದ ತಪಸ್ಸು ಹಾಗೂ ಪುಣ್ಯದ ಫಲವಾಗಿ ನೀನು ಸ್ವರ್ಗಕ್ಕೆ ಬಾ.


11 ಯಯಾತಿಯು ಬಹಳ ದೀರ್ಘಕಾಲದವರೆಗೆ ಸ್ವರ್ಗದಲ್ಲಿ ವೈಭವದಿಂದ ಜೀವಿಸಿದ. ಇಂದ್ರನಿಗೆ ಸಮಾನವಾದ ಕೀರ್ತಿ ಅವನಿಗೆ ಲಭಿಸಿತು. ಒಂದು ದಿನ ದೇವಲೋಕದ ಸಭೆಯಲ್ಲಿ. . .
ನಾನು ಸಹಸ್ರ ಅಶ್ವಮೇಧ ಯಾಗಗಳನ್ನು ಮಾಡಿದ್ದರಿಂದ ನನಗೆ ಈ ಇಂದ್ರ ಪದವಿ ಲಭಿಸಿದೆ.
ನಾನು ಮಾನವರಲ್ಲಿ ಮೊದಲ ಬಾರಿ ಮೃತ್ಯು ಹೊಂದಿದೆ, ಅನೇಕ ತಪಸ್ಸುಗಳನ್ನು ಮಾಡಿದೆ, ಆದ ಕಾರಣ ಶಿವನು ನನಗೆ ಯಮಲೋಕದ ಆಧಿಪತ್ಯವನ್ನು ಕೊಟ್ಟ.
ಈ ರೀತಿಯಾಗಿ ಪ್ರತಿಯೊಬ್ಬ ದೇವತೆಗಳೂ, ತಾವು ಮಾಡಿದ ತಪಸ್ಸು, ಪುಣ್ಯಗಳಿಂದಾಗಿ ತಮಗೆ ತಕ್ಕ ಪದವಿ ದೊರಕಿತು ಎಂದು ಹೇಳಿಕೊಂಡರು.
12 ಯಯಾತಿ, ನೀನು ಮಾಡಿದ ಯಾವ ಪುಣ್ಯದಿಂದಾಗಿ ನಿನಗೆ ಈ ಪದವಿ ಲಭಿಸಿತು?
ಇಂದ್ರ ! ನಾನು ಸಂಪಾದಿಸಿದ ಪುಣ್ಯವು ನಿಮ್ಮೆಲ್ಲರ ಪುಣ್ಯಕ್ಕಿಂತಲೂ ಹೆಚ್ಚಿನದು. ಮಹಾನ್ ಋಷಿಗಳೂ ನನಗೆ ಸಮಾನರಲ್ಲ.
13 ಯಯಾತಿ! ನಿನ್ನ ಜಂಭದ ಮಾತುಗಳಿಂದ ನೀನು ಋಷಿಗಳನ್ನು ನಿಂದಿಸಿದೆ. ಇದರಿಂದ ನಿನ್ನ ಪುಣ್ಯವೆಲ್ಲವೂ ನಾಶಹೊಂದಿದವು. ನನ್ನ ಸೇವಕರು ಈ ಕೂಡಲೇ ನಿನ್ನನ್ನು ಭೂಲೋಕಕ್ಕೆ ತಳ್ಳುವರು. ನೀನು ಹೊರಟುಹೋಗು!
14 ಇಂದ್ರನ ಮಾತು ಮುಗಿಯುವಷ್ಟರಲ್ಲೇ ಅವನ ಸೇವಕರು ಯಯಾತಿಯನ್ನು ಸೆಳೆದು ಕರೆದೊಯ್ದರು.
ಇಂದ್ರ, ನನ್ನನ್ನು ಕ್ಷಮಿಸು. ನನ್ನ ಜಂಭದಿಂದಾಗಿ ನಾನು ನನ್ನನ್ನೇ ಹೊಗಳಿಕೊಂಡೆ. ಅದರಿಂದಲೇ ನನಗೆ ಈ ಗತಿ ಒದಗಿ ಬಂತು. ಆದರೆ, ನಾನು ಭೂಮಿಗೆ ಹೋಗಿ ಬೀಳುವಾಗ ನಾನು ಸಾಧುಗಳ ನಡುವೆ ಬೀಳುವಂತೆ ಮಾಡು.




ಒಬ್ಬನು ಎಷ್ಟೇ ಪುಣ್ಯಕರ್ಮಗಳನ್ನು ಮಾಡಿದರೂ, ಅದನ್ನು ಕುರಿತು ಜಂಭ ಕೊಚ್ಚಿಕೊಂಡರೆ ಅವೆಲ್ಲ ವ್ಯರ್ಥವಾಗುವುವು. ಮಹಾಭಾರತದ ಆದಿಪರ್ವದಲ್ಲಿ ಬರುವ ಈ ಕಥೆಯಿಂದ ಈ ಸಂಗತಿ ತಿಳಿದು ಬರುವುದು.



''ಎಲೈ, ಮಹಾನುಭಾವನಾದ ದೊರೆಯೆ, ಕೆಲವು ದಿನದ ಬಾಳುವೆಯದು ಈ ಜನ್ಮ. ಜಗತ್ತಿನ ಸುಖಭೋಗಗಳೆಲ್ಲ ಕ್ಷಣಿಕ. ಯಾರು ಪರರ ಹಿತಕ್ಕಾಗಿ ಬದುಕುವರೋ ಅವರೇ ಜೀವಂತರು. ಉಳಿದವರು ಜೀವಚ್ಛವಗಳು. ತಮ್ಮಂತಹ ಉದಾರ ಮನಸ್ಸಿನ ಭರತಖಂಡದ ರಾಜರೊಬ್ಬರು, ಅಧೋಗತಿಗಿಳಿದ ಭರತಖಂಡವನ್ನು ಪುನಃ ಮೇಲೆತ್ತುವುದಕ್ಕೆ ಎಷ್ಟೋ ಸಹಾಯ ಮಾಡಬಹುದು. ಮುಂದಿನ ಜನಾಂಗ ದೀರ್ಘಕಾಲ ತಮ್ಮನ್ನು ಸ್ಮರಿಸಿ ಕೊಂಡಾಡುವಂತಹ ಕೀರ್ತಿಯನ್ನು ಗಳಿಸಬಹುದು. ಅಜ್ಞಾನಾಂಧಕಾರದಲ್ಲಿ ಮುಳುಗಿ ನರಳುತ್ತಿರುವ ಕೋಟ್ಯನುಕೋಟಿ ಭಾರತೀಯರಿಗಾಗಿ ಭಗವಂತನು ತಮ್ಮ ಹೃದಯ ಮರುಗುವಂತೆ ಮಾಡಲಿ ಎಂಬುದೇ ನನ್ನ ಪ್ರಾರ್ಥನೆ...''

— ಸ್ವಾಮಿ ವಿವೇಕಾನಂದ (ಚಿಕಾಗೋದಿಂದ ಮೈಸೂರು ಮಹಾರಾಜರಿಗೆ ಬರೆದ ಪತ್ರದಿಂದ)